15 ಪ್ರಶ್ನೆ = 72
4RR
17/11

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ಇವರು ನಿಯಮ 330 ಮೇರೆಗೆ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ**

***ಸೂಚನೆ :-***

ರಾಜ್ಯದಲ್ಲಿ ಜಿಲ್ಲಾದ್ಯಂತ ವಿವಿಧ ನಗರ, ಪಟ್ಟಣಗಳಲ್ಲಿ ಕಳೆದ 50 ವರ್ಷಗಳಿಂದ ಕಂದಾಯ ಕೃಷಿ ಭೂಮಿಯಲ್ಲಿ ಭೂ ಮಾಲೀಕರಿಂದ ನಿವೇಶನಗಳಂತೆ ನೋಂದಣಿಯಿಲ್ಲದ ಸ್ಟಾಂಪ್ ಪೇಪರ್ ಗಳಲ್ಲಿ ಒಪ್ಪಿಗೆ ಪತ್ರ, ಕ್ರಯ ಕರಾರು ಪತ್ರ (ಅಗ್ರಿಮೆಂಟ್) ಸ್ವಾಧೀನಪತ್ರ, ಅಡಮಾನ ಪತ್ರ ಮತ್ತು ಇವರ ಜಮೀನಿನ ಪಕ್ಕದಲ್ಲಿದ್ದ ಸರ್ಕಾರದ ಖರಾಬು ಭೂ ಜಾಗಗಳಲ್ಲಿ ಸ್ವತ್ತಿನ ಆರ್.ಟಿ.ಸಿ.ಯಲ್ಲಿ ದಾಖಲಾಗದ ಭೂಮಿಯಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಬಡ ಜನರಿಗೆ ಹಕ್ಕುಪತ್ರ ನೀಡುವ ಕುರಿತು ಸದನದಲ್ಲಿ ನಿಯಮ 330ರಡಿ ಚರ್ಚಿಸಲು ಅವಕಾಶ ಮಾಡಿಕೊಡಬೇಕೆಂದು ಸದನದಲ್ಲಿ ಮಂಡಿಸ ಬಯಸುತ್ತೇನೆ.

***ಹೇಳಿಕೆ:-***

ದಿನಾಂಕ:01.01.2015ರ ಪೂರ್ವದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಸಿ ಮತ್ತು 94ಸಿಸಿ ರಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ ಅವುಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹ ಅರ್ಜಿದಾರರಿಗೆ ಹಕ್ಕುಪತ್ರ ವಿತರಿಸಲು ಕ್ರಮವಹಿಸಲಾಗಿದೆ.

ಆರ್‌ಡಿ 169 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**

- ಪ್ರಸ್ತಾಪಿತ ಜಮೀನಿನಲ್ಲಿ ಮಂಜೂರಿಯಾಗಿರುವ ಮೂಲ ಮಂಜೂರಿ ಕಡತಗಳು ಲಭ್ಯವಿರುವುದಿಲ್ಲವಾದ್ದರಿಂದ ಕಛೇರಿ ಆದೇಶ ಮತ್ತು ರೆವಿನ್ಯೂ ನಕ್ಷೆ ಸಾಧ್ಯವಾಗುತ್ತಿರುವುದಿಲ್ಲ.
- ಪ್ರಸ್ತಾಪಿತ ಸ.ನಂ 81 ರ ಕರ್ದಾ ಪ್ರತಿ ಮತ್ತು ಟಿಪ್ಪಣಿ ಲಭ್ಯವಿರುವುದಿಲ್ಲ. ಲಭ್ಯವಿರುವ ಆಕಾರ ಬಂದ್ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
- ಸರ್ಕಾರಿ ಗೋಮಾಳ, ಸರ್ಕಾರಿ ಖರಾಬ್, ಆಕಾರ ಕಂಡ ಬಂಜರು, ಜಮೀನುಗಳನ್ನು ಮಂಜೂರು ಮಾಡಲಾಗುತ್ತಿದೆ.
- ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1966 ರ ನಿಯಮಗಳು 97 (4) ರನ್ವಯ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ ಆರ್ ಡಿ 02 ಎಲ್.ಜಿ. ಪಿ 2021 ರ ದಿನಾಂಕ: 30/01/2021 ಮತ್ತು ಆರ್.ಡಿ 45 ಎಲ್.ಜಿ.ಪಿ. 2023,ದಿನಾಂಕ:01/12/2023 ನಿರ್ದೇಶನಗಳನ್ವಯ ಅನಧೀಕೃತ ಸಾಗುವಳಿ ಸಕ್ರಮೀಕರಣ ಯೋಜನೆಯಡಿ ನಿಗಧಿತ ಅವಧಿಯಲ್ಲಿ ಸಲ್ಲಿಸಲ್ಪಟ್ಟ ನಮೂನೆ, 50, 53 ಹಾಗೂ 57 ರ ಅರ್ಜಿಗಳನ್ನು ಗ್ರಾಮ ಆಡಳಿತ ಅಧಿಕಾರಿ ರಾಜಸ್ವ ನಿರೀಕ್ಷಕರು ಕ್ಷೇತ್ರ ಪರಿಶೀಲನೆ ನಡೆಸಿ ಪೂರಕ ದಾಖಲೆಗಳೊಂದಿಗೆ ಭೂ ಲಭ್ಯತೆಯನ್ನು ಅನುಸರಿಸಿ ಪ್ರಸ್ತಾವನೆ ಸಲ್ಲಿಸುವಂತೆ ತಾಲ್ಲೂಕು ಕಛೇರಿಯಲ್ಲಿ ವಿಷಯ ನಿರ್ವಾಹಕರು, ಶಿರಸ್ತೇದಾರರು ಕಛೇರಿ ಟಿಪ್ಪಣಿ ದಾಖಲಿಸಿ ಮಂಡಿಸುವಂತೆ ತಹಶೀಲ್ದಾರ್ ರವರು ತಾಲ್ಲೂಕು ಬಗರ್ ಹುಕುಂ ಸಕ್ರಮೀಕರಣ ಸಮಿತಿಗೆ ಮಂಡಿಸಿದ ನಂತರದಲ್ಲಿ ಸದರಿ ಸಮಿತಿಯು ಅನುಮೋದಿಸಿದಲ್ಲಿ, ಅರ್ಜಿದಾರರಿಗೆ ಕಿಮ್ಮತ್ತು ಪಾವತಿಸಲು ನೋಟೀಸು ನೀಡಿ, ಕಿಮ್ಮತ್ತನ್ನು ಸರ್ಕಾರಕ್ಕೆ ಪಾವತಿಸಿದ ನಂತರದಲ್ಲಿ ಸಾಗುವಳಿ ಚೀಟಿ ವಿತರಿಸಿ ಪಹಣಿ ದಾಖಲೆಗಳಲ್ಲಿ, ನಮೂದಿಸಲು ಕ್ರಮವಹಿಸಬೇಕಾಗಿರುತ್ತದೆ.
- ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಹಳೆಯ ಕೈಬರಹದ ಪಹಣಿ ಮೂಲ ಮಂಜೂರಿ ಕಡತಗಳನ್ನು ಭೂ ಸುರಕ್ಷಾ ಯೋಜನೆಯಡಿ ಸ್ಕ್ಯಾನ್ ಮಾಡಿ ತಂತ್ರಾಂಶದಲ್ಲಿ ಅಪ್ ಲೋಡ್ ಮಾಡಿ ಸಂರಕ್ಷಿಸಲು ಕ್ರಮವಹಿಸಲಾಗುತ್ತಿರುತ್ತದೆ.

**ಸಂಖ್ಯೆ**: ಆರ್‌ಡಿ 168 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**

1562ನೇ ನಿ-330 = (69)
ಆರ್
1711

**ಕರ್ನಾಟಕ ವಿಧಾನಪರಿಷತ್‌ನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ಇವರು ನಿಯಮ-330ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ:-**

ಕರ್ನಾಟಕ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ರೆವಿನ್ಯೂ ಇಲಾಖೆಯ ಭೂ ಸುರಕ್ಷಾ ಹಾಗೂ ಇತರೆ ಇತ್ತೀಚಿನ ಯೋಜನೆಗಳು ಜನರಿಗೆ ಸ್ವಲ್ಪ ಮಟ್ಟಿಗೆ ನೆಮ್ಮದಿಯನ್ನು ಒದಗಿಸಿವೆ. ಇಷ್ಟರ ಮಟ್ಟಿಗೆ ರೆವಿನ್ಯೂ ಇಲಾಖೆಯು ಶ್ಲಾಘನೀಯವಾಗಿರುತ್ತದೆ. ಟಿಪ್ಪು ಸುಲ್ತಾನ್ ಕಾಲದಿಂದ ಮತ್ತು ರೆವಿನ್ಯೂ ಸರ್ವೇ 1863 ರಿಂದ ಇಲ್ಲಿಯವರೆಗೂ ಸರ್ಕಾರವು ಜಮೀನುಗಳನ್ನು ಉಳುಮೆ ಮಾಡುವ ಬಡ ರೈತರಿಗೆ, ಧೀನ ದಲಿತರಿಗೆ, ನೊಂದವರಿಗೆ ಮಂಜೂರು ಮಾಡುತ್ತಾ ಬಂದಿರುತ್ತದೆ. ಸದರಿ ಜಮೀನುಗಳನ್ನು ಮಂಜೂರುದಾರರು ವ್ಯವಸ್ಯಾಯ ಮಾಡುತ್ತಾ ಬಂದಿರುತ್ತಾರೆ. ಆದರೆ ರೈತರುಗಳ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡಲು ಜಮೀನಿನ ಮೂಲ ಮಂಜೂರು ದಾಖಲೆಯ ಓ.ಎಮ್ (ಕಚೇರಿ ಆದೇಶ) ನ ಪ್ರತಿ ಮತ್ತು ರೆವಿನ್ಯೂ ನಕ್ಷೆ ಅವಶ್ಯವಿರುತ್ತದೆ. ಆದರೆ ಇದನ್ನು ರೆವಿನ್ಯೂ ಇಲಾಖೆಯು ಸರಿಯಾಗಿ ನಿರ್ವಹಣೆ ಮಾಡದಲೇ ಇರುವುದರಿಂದ ತುಂಬಾ ತೊಂದರೆಯಾಗಿರುತ್ತದೆ. ಉದಾಹರಣೆಗೆ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ಕಸಬಾ ಹೋಬಳಿ ಬೈರನಹಳ್ಳಿ ಗ್ರಾಮದ ಸರ್ವೇ ನಂ ಹಳೇ ನಂ 81 ರಲ್ಲಿ 1920 ರಿಂದ 1960 ರ ವರೆಗೆ ಯಾರು ಯಾರಿಗೆ ಮಂಜೂರು ಮಾಡಲಾಗಿದೆ ಇದಕ್ಕೆ ಸಂಬಂಧಪಟ್ಟಂತಹ ಓ.ಎಮ್ (ಕಚೇರಿ ಆದೇಶ) ನ ಪ್ರತಿ ಹಾಗೂ ರೆವಿನ್ಯೂ ನಕ್ಷೆ ನೀಡಬೇಕೆಂದು ಕೋರುತ್ತಾ ಯಾವ ರೀತಿಯ ಜಮೀನುಗಳನ್ನು ಸರ್ಕಾರ ಮಂಜೂರು ಮಾಡಲಾಗುತ್ತದೆ. ಇದರ ಪ್ರಕ್ರಿಯೆಗಳೇನು ಎಂಬುದರ ಪೂರ್ತಿ ವಿವರಣೆಯೊಂದಿಗೆ ಮಾಹಿತಿ ಒದಗಿಸಬೇಕೆಂದು ಕೋರುತ್ತಾ ರಾಜ್ಯದ ಎಲ್ಲಾ ಕಡೆ ಮೂಲ ಮಂಜೂರು ದಾಖಲೆಯ ಓ.ಎಮ್ (ಕಚೇರಿ ಆದೇಶ) ನ ಪ್ರತಿ ಮತ್ತು ರೆವಿನ್ಯೂ ನಕ್ಷೆಗಳನ್ನು ಸಂರಕ್ಷಿಸಿ ಇಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸದನದಲ್ಲಿ ಮಂಡಿಸುತ್ತೇನೆ.

******

**ಹೇಳಿಕೆ:**

- ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಬೈರನಹಳ್ಳಿ ಗ್ರಾಮದ ಮೂಲತಃ ಗೋಮಾಳ ಸ.ನಂ 10 ರಲ್ಲಿ ಶ್ರೀ ಹುಚ್ಚಪ್ಪ ಎ ಕೆ ರವರಿಗೆ ಮಂಜೂರಾಗಿದ್ದು, ದುರಸ್ತಿಯಂತೆ ಹೊಸ ಸ.ನಂ 81 ನಮೂದಾಗಿರುತ್ತದೆ.
- ಬೈರನಹಳ್ಳಿ ಗ್ರಾಮದ ಸ.ನಂ 10 ರಲ್ಲಿ ಒಟ್ಟು 57 ಜನರಿಗೆ ದರಖಾಸ್ತು ಮೂಲಕ ಮಂಜೂರಾಗಿರುತ್ತದೆ.